**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 230/2017 ಸಿ.ಡಬ್ಲ್ಯೂ –೫ ಪಿ.ಡಬ್ಲ್ಯೂ -೪

| | | |
|---|---|---|
| ಹೆಸರು | ಃ | ದೇವಿಂದ್ರ |
| ತಂದೆಃ ಗಂಡ | ಃ | ಧರ್ಮಣ್ಣ |
| ವಯಸ್ಸು | ಃ | ೬೫ ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | ಃ | ಬಂಗರಗಾ |

ದಿನಾಂಕಃ೩ ೧.೦೫.೨೦೨೩

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಆರೋಪಿ ನಂ.೧ ಅಳಿಯ, ಆರೋಪಿ ನಂ.೨ ಮತ್ತು ೩ ನನ್ನ ಮಗಳ ಅತ್ತೆ ಮಾವ, ಚಾಸಾ-1 ನನ್ನ ಮಗಳು, ಚಾಸಾ-4 ನನ್ನ ಧರ್ಮಪತ್ನಿ, ಚಾಸ-10 ನನ್ನ ಮಗ, ಚಾಸಾ-2, 3, 6 ರಿಂದ 9, 11 ಮತ್ತು 12 ರವರ ಪರಿಚಯ ಇರುತ್ತದೆ.

ಆರಂಭದಲ್ಲಿ ಚಾಸಾ-೧ ರವರಿಗೆ ಅಡುಗೆ ಸರಿ ಮಾಡುವುದಿಲ್ಲ ಎಂದು ಜಗಳ ಮಾಡಿದರು, ಆಗ ನಾನು ಹೋಗಿ ಚಾಸಾ-೧ ರವರನ್ನು ನನ್ನ ಮನೆಗೆ ಕರೆದುಕೊಂಡು ಬಂದೆನು. ನಂತರ ನಾಲ್ಕು ಜನ ಹಿರಿಯರನ್ನು ಕರೆದುಕೊಂಡು ಬಂದು ಚಾಸಾ-೧ ರವರನ್ನು ಚೆನ್ನಾಗಿ ನೋಡಿಕೊಳ್ಳುತ್ತೇವೆ ಎಂದು ಕರೆದುಕೊಂಡು ಹೋಗಿರುತ್ತಾರೆ. ನಂತರ ನಾನು ಚಾಸಾ-೧ ರವರನ್ನು ಬಾಣತನಕ್ಕೆ ಕರೆದುಕೊಂಡು ಬಂದಿರುತ್ತೇನೆ. ಹೆರಿಗೆ ಆದ ಒಂದು ವರೆ ತಿಂಗಳ ನಂತರ ಆರೋಪಿ ನಂ.೧ ಬಂದು ಚಾಸಾ-೧ ರವರಿಗೆ ತಲೆಗೆ ಹೊಡೆದು ರಕ್ತಗಾಯ ಮಾಡಿರುತ್ತಾರೆ, ಕೈ ಮುರಿದಿರುತ್ತಾನೆ, ಕಾಲು ಮುರಿದಿರುತ್ತಾನೆ, ಆಗ ನಾವು ಚಾಸಾ-೧ ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ನನ್ನ ಮಗಳು ಈಗ ತವರು ಮನೆಯಲ್ಲಿ ಇರುತ್ತಾರೆ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ನೀಡಲಾಯಿತು)

**ಪಾಟೀ ಸವಾಲು ಸಸಅ ರವರಿಂದಃ**

ಆರೋಪಿ ನಂ.೧ ಚಾಸಾ-೧ ರವರಿಗೆ ದಿನಾಲು ಕುಡಿದು ಬಂದು ಹೊಡೆ ಬಡೆ ಮಾಡುತ್ತಿದ್ದನು, ಮೋಟರ್ ಸೈಕಲ್ ತೆಗೆದುಕೊಂಡು ಬಾ, ಹಣ ತೆಗೆದುಕೊಂಡು ಬಾ ಎಂದು ಕಿರುಕುಳ ಕೊಡುತ್ತಿದ್ದನು ಎಂದರೆ ಸರಿ. ಆರೋಪಿ ನಂ.೧ ಚಾಸಾ-೧ ರವರಿಗೆ ಕಬ್ಬಿಣದ ರಾಡಿನಿಂದ ತಲೆಗೆ, ಕಾಲಿಗೆ, ಕೈಯನ ಮಣಿಕಟ್ಟಿಗೆ ಹೊಡೆದಿರುತ್ತಾನೆ ಎಂದರೆ ಸರಿ. ಆರೋಪಿ ನಂ.೧ ಚಾಸಾ-೪ ರವರಿಗೂ ಸಹ ಕೂಡ ರಾಡಿನಿಂದ ಬೆನ್ನಿನ ಮೆಲೆ ಹೊಡೆದಿರುತ್ತಾನೆ ಎಂಧರೆ ಸರಿ. ನಾನು, ಚಾಸಾ-೪, ಚಾಸಾ-೯, ಚಾಸಾ-೧೧

ಮತ್ತು ೧೨ ರವರು ಸೇರಿ ಜಗಳ ಬಿಡಿಸಿರುತ್ತೇವೆ ಎಂಧರೆ ಸರಿ. ಆರೋಪಿ ನಂ.೧ ಚಾಸಾ-೧ ರವರಿಗೆ ನಿನ್ನ ಜೀವ ಇಡುವುದಿಲ್ಲ, ಜೀವ ಖಲಾಸ ಮಾಡುತ್ತೇನೆ ಎಂದು ಜೀವ ಬೆದರಿಕೆ ಹಾಕಿದನು ಎಂಧರೆ ಸರಿ. ಆರೋಪಿ ನಂ.೨ ಮತ್ತು ೩ ರವರು ಸಹ ಕೂಡ ಚಾಸಾ-೧ ರವರಿಗೆ ಹೊಡೆ ಬಡೆ ಮಾಡುವುದು, ಮಾನಸಿಕ ಮತ್ತು ದೈಹಿಕ ಕಿರುಕುಳ ಕೊಡುವುದನ್ನು ಮಾಡುತ್ತಿದ್ದರು ಎಂದರೆ ಸರಿ. ಆರೋಪಿ ನಂ.೨ ಮತ್ತು ೩ ರವರು ಮನೆಗೆ ಬಂದು ಚಾಸಾ-೧ ರವರು ಮನೆಗೆ ಬಂದರೆ ಖಲಾಸ ಮಾಡುತ್ತೇವೆ ಎಂಧು ಜೀವ ಬೆದರಿಕೆ ಹಾಕಿರುತ್ತಾರೆ ಎಂಧರೆ ಸರಿ.

ಆರೋಪಿತರು ಚಾಸಾ-೧ ರವರನ್ನು ಮುಂಬೈನಲ್ಲಿ ಒಂದು ರಾತ್ರಿ ಮನೆ ಬಿಟ್ಟು ಹೊರ ಹಾಕಿರುತ್ತಾರೆ, ಆಗ ಚಾಸಾ-೧ ರಾತ್ರಿಯಿಡಿ ಹೊರಗಡೆಯೇ ಕುಳಿತಿರುತ್ತಾರೆ ಎಂಧರೆ ಸರಿ. ನಾನು ಘಟನೆ ಕುರಿತು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂಧರೆ ಸರಿ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು.ಮಾ.-೧ ನ್ನು ನೋಡಿ ಗುರುತಿಸಿರುತ್ತಾರೆ.

## <u>ಪಾಟೀ ಸವಾಲು ಆರೋಪಿತರ ಪರ ಶ್ರೀ ಬಿ.ಎ.ಡಿ. ವಕೀಲರಿಂದ</u>

ನನಗೆ ಕಿವಿ ಕೇಳುವುದಿಲ್ಲ ಎಂಧರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು ಸ್ವಲ್ಪ ಕಡಿಮೆ ಕೇಳಿಸುತ್ತದೆ ಎಂದು ನುಡಿಯುತ್ತಾರೆ. ಮುಂಬೈಯಲ್ಲಿ ನಡೆದ ಘಟನೆಯನ್ನು ನಾನು ಕಣ್ಣಾರೆ ನೋಡಿರುವುದಿಲ್ಲ ಎಂಧರೆ ಸರಿ. ಪೋಲಿಸರು ನನ್ನ ಹೇಳಿಕೆಯನ್ನು ಘಟನೆ ನಡೆದ ಮರುದಿನ ಬಂಗರಗಿ ಗ್ರಾಮದಲ್ಲಿ ಪಡೆದುಕೊಂಡು ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಪೊಲಿಸರು ನನ್ನ ಹೇಳಿಕೆಯನ್ನು ಬರೆದುಕೊಂಡು ನನಗೆ ಓದಿ ಹೇಳಿರುವುದಿಲ್ಲ ಎಂದರೆ ಸರಿ. ಆರೋಪಿ ನಂ.೧ ಚಾಸಾ-೪ ರವರಿಗೆ ರಾಡಿನಿಂದ ಬೆನ್ನಿಗೆ ಹೊಡೆದಿರುವುದನ್ನು ನಾನು ನೋಡಿರುವುದಿಲ್ಲ ಎಂಧರೆ ಸರಿ ಅಲ್ಲ. ಚಾಸಾ-೪ ರವರಿಗೆ ಗಾಯವಾಗಿರುವುದಿಲ್ಲ, ನೋವಾಗಿರುತ್ತದೆ. ಚಾಸಾ-೪ ರವರಿಗೂ ಸಹ ಕೂಡ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಚಾಸಾ-೪ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುವುದಿಲ್ಲ. ಚಾಸಾ-೧ ರವರು ಸುಮಾರು 15-20 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ, ಮೊದಲು ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ನಂತರ ಪಿ.ಜಿ.ಶಹಾ ಆಸ್ಪತ್ರೆಗೆ ದಾಖಲಾಗಿರುತ್ತಾರೆ. ಆಳಂದ ಸರಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆಯನ್ನು ಪಡೆದು ನಂತರ ಗುಲಬರ್ಗಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ.

ಪಂಚಾಯತಿ ಆಯಿತು ಎಂದು ಹೇಳುತ್ತೀರಲ್ಲಾ, ಪಂಚಾಯತಿಯಲ್ಲಿ ಯಾರು ಯಾರು ಇದ್ದರು ಎಂದು ಹೇಳಲು ಬರುತ್ತದೆಯಾ ಎಂಧರೆ ಸಾಕ್ಷಿಯು ಸಾವಳೇಶ್ವರ ಗ್ರಾಮದವರು ಇದ್ದರು ಅವರ ಹೆಸರು ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಪಂಚಾಯತಿ ನಡೆದ ವರ್ಷ, ತಿಂಗಳು ದಿನಾಂಕ, ಹೇಳಲು ಬರುವುದಿಲ್ಲ, ಸಾಕ್ಷಿ ಮುಂದುವರೆದು ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ, ಆದ್ದರಿಂದ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಪಂಚಾಯತಿಯಲ್ಲಿ ಯಾವುದೇ ಕಾಗದ ಪತ್ರ ಬರೆದಿರುವುದಿಲ್ಲ, ಸಾಕ್ಷಿ ಮುಂದುವರೆದು ಆರೋಪಿತರು ಚೆನ್ನಾಗಿ ಇಟ್ಟುಕೊಳ್ಳುತ್ತೇವೆ ಎಂದು ಹೇಳಿದರು ಅದಕ್ಕಾಗಿ ಕಳಿಸಿರುತ್ತೇವೆ ಎಂದು ನುಡಿಯುತ್ತಾರೆ. ಆರೋಪಿತರು ಚಾಸಾ-೧ ರವರನ್ನು ಚೆನ್ನಾಗಿಯೇ ಇಟ್ಟುಕೊಂಡಿರುತ್ತಾರೆ ಎಂದರೆ ಸರಿ ಅಲ್ಲ. ಆರೋಪಿತರು ಚಾಸಾ-೧ ರವರು ಹೆರಿಗೆಗೆ ಬರುವುದಕ್ಕಿಂತ ಪೂರ್ವದಲ್ಲಿ ಯಾವುದೇ ತ್ರಾಸು ಕೊಟ್ಟಿರುವುದಿಲ್ಲ ಎಂಧರೆ ಸರಿ ಅಲ್ಲ. ಮದುವೆ ನಂತರ ಚಾಸಾ-೧ ಆರೋಪಿತರ ಜೊತೆ ಮುಂಬೈನಲ್ಲಿ ಇದ್ದರು.

ಆರೋಪಿ ನಂ-೧ ಚಾಸಾ-೧ ರವರಿಗೆ ಮೋಟರ್ ಸೈಕಲ ತೆಗೆದುಕೊಳ್ಳಬೇಕು ಹಣ ತೆಗೆದುಕೊಂಡು ಬಾ ಎಂದು ಕಿರುಕುಳ ನೀಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಚಾಸಾ-೧ ರವರು ಹೆರಿಗೆಗೆ ಬಂದಾಗಿನಿಂದಲೂ ನಾವು ಅವಳ ಗಂಡನ ಮನೆಗೆ ಕಳಿಸಿಕೊಟ್ಟಿರುವುದಿಲ್ಲ ಎಂಧರೆ ಸಾಕ್ಷಿ ಮುಂದುವರೆದು ಅವರೇ ಬಂದಿರುವುದಿಲ್ಲ ಹಾಗಾಗಿ ಕಳಿಸಿಕೊಟ್ಟಿರುವುದಿಲ್ಲ ಅವರೇ ಬಂದು ಜಗಳ ಮಾಡಿರುತ್ತಾರೆ ಎಂಧು ನುಡಿಯುತ್ತಾರೆ. ಆರೋಪಿ ನಂ.೧ ಒಬ್ಬನೇ ಚಾಸಾ-೧ ರವರನ್ನು ಕರೆಯಲು ಬಂದಿದ್ದನು ಎಂದರೆ ಸರಿ ಅಲ್ಲ, ಸಾಕ್ಷಿಯು ಜಗಳ ಮಾಡಲೆಂದೇ ಎಂದು ಬಂದಿದ್ದನು ಎಂದು ನುಡಿಯುತ್ತಾರೆ. ಚಾಸಾ-೧ ರವರನ್ನು ಅವಳ ಗಂಡನ ಜೊತೆ ಕಳಿಸಬಾರದೆಂಬ ಉದ್ದೇಶದಿಂದ ಈ ಖೊಟ್ಟಿ ಫಿರ್ಯಾದಿಯನ್ನು ಸಲ್ಲಿಸಿರುತ್ತೇವೆ ಎಂಧರೆ ಸರಿ ಅಲ್ಲ. ಆರೋಪಿತರು ಚಾಸಾ-೧ ರವರಿಗೆ ಎಂದಿಗೂ ಜೀವ ಬೆದರಿಕೆ ಹಾಕಿರುವುದಿಲ್ಲ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಹೊಡೆ ಬಡೆ ಮಾಡಿರುವುದಿಲ್ಲ ಎಂಧರೆ ಸರಿ ಅಲ್ಲ. ಆರೋಪಿತರು ಎಂದಿಗೂ ಚಾಸಾ-೧ ರವರು ಮುಂಬೈಯಲಿ ಇರುವಾಗ ಮನೆಬಿಟ್ಟು ಹೊರ ಹಾಕಿರುವುದಿಲ್ಲ, ಮತ್ತು ಒಂದು ದಿನ ಚಾಸಾ-೧ ರವರನ್ನು ಇಡೀ ರಾತ್ರಿ ಮನೆಯಿಂದ ಹೊರ ಹಾಕಿರುವುದಿಲ್ಲ ಎಂಧರೆ ಸರಿ ಅಲ್ಲ. ಆರೋಪಿ ನಂ.೧ ರವರು ಬೇರೆ ಮನೆ ಮಾಡಿ ಚಾಸಾ-೧ ರವರನ್ನು ಇಡಬೇಕೆನ್ನುವ ಉದ್ದೇಶದಿಂದ ಚಾಸಾ-೧ ರವರನ್ನು ಆರೋಪಿ ನಂ.೧ ರವರ ಜೊತೆ ಕಳಿಸಿರುವುದಿಲ್ಲ ಎಂದರೆ ಸರಿ ಅಲ್ಲ. ಚಾಸಾ-೧ ರವರನ್ನು ಮೊದಲು ಸರಕಾರಿ ಆಸ್ಪತ್ರೆಗೆ ತೋರಿಸಿ ನಂತರ ಗುಲಬರ್ಗಾದ ಪಿ.ಜಿ. ಶಹಾ ಆಸ್ಪತ್ರೆಗೆ ದಾಖಲಿಸಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಆರೋಪಿ ನಂ.೧ ಯಾವುದೇ ರೀತಿಯಾದ ಘಟನೆ ನಡೆದಿರುವುದಿಲ್ಲ ಆರೋಪಿ ನಂ.೧ ಚಾಸಾ-೧ ರವರಿಗೆ ಯಾವುದೇ ರೀತಿ ಕಿರುಕುಳ ನೀಡಿರುವುದಿಲ್ಲ ಎಂಧರೆ ಸರಿ ಅಲ್ಲ. ಘಟನೆಗೂ ಮತ್ತು ಮು.ಮಾ.-೧ ಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿ ಅಲ್ಲ.

ಮರುವಿಚಾರಣೆ : ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂ ದ